# ಕನ್ನಡಾಂದ್ರೆ ತುಂಬ ಸುಲಭ

ಅಮ್ಮ ನಾನು ಹೋಗ್ ಬರ್ತೀನಿ
ಪರೀಕ್ಷೆ ಬರೆಯಲಿಕ್ಕೆ!
ಚೆನ್ನಾಗ್ ಬರ್ದು ತಗೋಳ್ತೀನಿ
ಗುರಿ ಇದ್ದಷ್ಟು ಅಂಕ!!

ನೀನು ಹೇಳಿ ಕೊಟ್ಟಿದ್ನೆಲ್ಲ
ಚೆನ್ನಾಗ್ ಓದ್ಕೊಂಡಿವ್ನಿ!
ಮಿಸ್ಸು ಕಲಿಸಿದ್ ಪಾಠನೆಲ್ಲ
ಒಂದೂ ಬಿಡ್ದೆ ಕಲಿತಿವ್ನಿ!!

ಕನ್ನಡಾಂದ್ರೆ ತುಂಬ ಸುಲಭ
ನೂರಕ್ ನೂರು ಗ್ಯಾರಂಟಿ!
ಇಂಗ್ಲಿಷಂದ್ರೆ ಸ್ವಲ್ಪ ಕಷ್ಟ
ಸ್ಕೋರ್ ಮಾಡೋದ್ಕ್ ಅಷ್ಟೆ!!

ಮ್ಯಾಥ್ಸು, ಸೈನ್ಸು ಕಷ್ಟವಾದ್ರು
ಪರವಾಗಿಲ್ಲ ಕಲಿತಿವ್ನಿ!
ಹಿಂದಿ, ಸಮಾಜ ಎರಡೂನು
ಉರುಹಚ್ಚಿ ಹೊಡದಿವ್ನಿ!!

ಏನೇ ಆಗ್ಲಿ ಫೇಲ್ ಅಂತು
ಆಗೋದಿಲ್ಲ ನಂಗೊತ್ತು!
ನಮ್ಮ ಸ್ಕೂಲು ಸಣ್ಣದಾದ್ರು
ಉಳಿಸ್ಕೊಂಡಿದೆ ಕಿಮ್ಮತ್ತು!!

ರ್‍ಯಾಂಕು ಬರ್‍ದೆ ಹೋದ್ರು ಕೂಡ
ಪಾಸ್ ಆಗೋದ್ ಗ್ಯಾರಂಟಿ!
ಸ್ವಂತ ಬುದ್ಧಿ ಇರೋದ್ರಿಂದ
ಬಚಾವ್ ಆಗ್ತೇನ್ ಏನಂತಿ!!

**–ಜೇನಹಳ್ಳಿ ಸಿದ್ಧಲಿಂಗಪ್ಪ**



---

# ಗರ್ವದ ಜಿಂಕೆ

ಅನೇಕ ವರುಷಗಳ ಹಿಂದೆ ಕಾಡಿನಲ್ಲಿ ಒಂದೇ ಒಂದು ಜಿಂಕೆಯಿತ್ತು. ಅದರ ಅಂದ ಚಂದ ಕಂಡು ಇತರ ಪಕ್ಷಿ– ಪ್ರಾಣಿಗಳು ಅದನ್ನು ತುಂಬಾ ಹೊಗಳುತ್ತಿದ್ದವು. ಹೀಗಾಗಿ ಆ ಜಿಂಕೆಗೆ ಗರ್ವ ಬಂದು ಬಿಟ್ಟಿತ್ತು. ತಾನು ಇನ್ನೂ ಸುಂದರವಾದರೆ ಈ ಕಾಡಿಗೆ ನಾನೇ ಮಹಾರಾಣಿಯಾಗಬಹುದು ಎಂಬ ಮಹದಾಸೆ ಬಂದದ್ದೇ ದೇವರ ಕುರಿತು ತಪಸ್ಸನ್ನು ಪ್ರಾರಂಭಿಸಿತು.

ದಯಾಮಯನಾದ ಭಗವಂತ ಕಾಣಿಸಿಕೊಂಡು 'ಹೇ ಜಿಂಕೆಯೇ ನಿನ್ನ ಭಕ್ತಿಗೆ ಮೆಚ್ಚಿರುವೆ. ನಿನಗೇನು ವರ ಬೇಕು ಕೋರಿಕೋ!' ಎಂದಾಗ ಜಿಂಕೆ ಹುರುಪಿನಿಂದ 'ಕರುಣಾಳುವೇ ನಾನು ಇನ್ನಷ್ಟು ಸುಂದರವಾಗಿ ಕಾಣುವಂತೆ ನನ್ನನ್ನು ಚಿನ್ನದ ಜಿಂಕೆಯನ್ನಾಗಿ ಮಾಡು' ಎಂದು ವರ ಕೇಳಿತು.

ಭಗವಂತ ನಗುತ್ತಾ, 'ತಥಾಸ್ತು' ಎಂದು ವರ ಕೊಟ್ಟು ಮಾಯವಾದ. ತಕ್ಷಣವೇ ಜಿಂಕೆಯು ಸ್ವರ್ಣಮಯವಾಯ್ತು. ಖುಷಿಯಿಂದ ಜಿಂಕೆ ಕಾಡಿನಲ್ಲೆಲ್ಲಾ ಅಲೆದಾಡುತ್ತಾ ತನ್ನ ಸೌಂದರ್ಯವನ್ನು ಪ್ರದರ್ಶಿಸುತ್ತಾ ಗರ್ವದಿಂದ ಅಲೆದಾಡತೊಡಗಿತು. ಆಗ ಆ ದೇಶದ ರಾಜಕುಮಾರಿ ವಾಯು ವಿಹಾರಕ್ಕಾಗಿ ಬಂದಳು. ಬಂಗಾರದ ಜಿಂಕೆ ಆಕೆಯ ಕಣ್ಣಿಗೆ ಬಿದ್ದದ್ದೇ ತಡ ಭಟರಿಗೆ ಆ ಜಿಂಕೆಯನ್ನು ಬಲೆ ಬೀಸಿ ಹಿಡಿಯುವಂತೆ ಸೂಚಿಸಿದಳು. ಸೈನಿಕರು ಜಿಂಕೆಯನ್ನು ಬಂಧಿಸಿ ತಂದರು. ಅದರ ಅಂದಕ್ಕೆ ಮನಸೋತ ರಾಜಕುಮಾರಿ ತನ್ನ ಅರಮನೆಗೆ ತೆಗೆದುಕೊಂಡು ಹೋಗಿ ಬಂಧಿಸಿಟ್ಟಳು. ಕಾಡಿನಲ್ಲಿ ಹಾಯಾಗಿ, ಸ್ವಚ್ಛಂದವಾಗಿದ್ದ ಜಿಂಕೆ ಬಂಧನದಲ್ಲಿ ಪರಿತಪಿಸತೊಡಗಿತು. ಯಾಕಾದರೂ ಸುಂದರವಾಗಬೇಕೆಂಬ ವರ ಕೇಳಿಕೊಂಡೆನೋ ಎಂದು ಪಶ್ಚಾತ್ತಾಪಪಟ್ಟಿತು. ದುರಾಶೆಯಿಂದ ಕೇಡಾಗುವುದು ಖಚಿತ ಎಂದು ಅದು ಮನಗಂಡಿತು.

**–ಅಮರಯ್ಯಾ ಪತ್ರಿಮಠ, ಸುರಪುರ**



## ನಿಮಗೆಷ್ಟು ಗೊತ್ತು

## ಸಾಮಾನ್ಯ ಜ್ಞಾನ

1. ಭಾರತದ ಸ್ಕಾಟ್‌ಲ್ಯಾಂಡ್ ಎಂದು ಕರೆಯುವ ಸ್ಥಳ ಯಾವುದು?
2. 'ಸಾಕರ್' ರಷ್ಯಾ ದೇಶದ ರಾಷ್ಟ್ರೀಯ ಕ್ರೀಡೆ. ಸರಿ/ತಪ್ಪು
3. 'ರಾಣಿ ಖೇತ್' ಗಿರಿಧಾಮ ಎಲ್ಲಿದೆ?
4. 'ಭಾರತ ರತ್ನ' ಪಡೆದ ಕೈಗಾರಿಕೋದ್ಯಮಿ ಯಾರು?
5. 'ಬ್ರಿಡ್ಜ್ ಟೌನ್' ಯಾವ ದೇಶದ ರಾಜಧಾನಿ?
6. ಜೂನ್ 14ನೇ ತಾರೀಖನ್ನು ಏನೆಂದು ಆಚರಿಸಲಾಗುತ್ತದೆ?
7. ಇಥಿಯೋಪಿಯಾ ದೇಶದ ರಾಷ್ಟ್ರೀಯ ಪ್ರಾಣಿ ಯಾವುದು?
8. ಜಗತ್ತಿನ ಅತಿ ದೊಡ್ಡ ಹಿಂದೂ ದೇವಾಲಯ ಕಾಂಬೋಡಿಯಾ ದೇಶದಲ್ಲಿದೆ. ಸರಿ/ತಪ್ಪು
9. ಘಾನಾ ದೇಶದ ಹಿಂದಿನ ಹೆಸರೇನು?
10. ವೀರ ಸಾವರ್ಕರ್ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ ಇನ್ನೊಂದು ಹೆಸರು ಏನು?

**(ಸಂಗ್ರಹ) ಶಾರದಾ ಪಿ.ಬಿ.**

1. ಕೊಡಗು 2. ತಪ್ಪು. ಚೆಸ್ 3. ಉತ್ತರಾಖಂಡ
4. ಜೆ.ಆರ್.ಡಿ. ಟಾಟಾ
5. ಬಾರ್ಬಡೋಸ್ 6. ವಿಶ್ವ ರಕ್ತದಾನಿ ದಿನ 7. ಸಿಂಹ
8. ಸರಿ
9. ಗೋಲ್ಡ್ ಕೋಸ್ಟ್ 10. ಪೋರ್ಟ್ ಬ್ಲೇರ್